**3ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಚನ್ನರಾಯಪಟ್ಟಣ.**

| | |
|---|---|
| ಸಾಕ್ಷಿದಾರರ ಹೆಸರು | **ರಂಗನಾಥ** |
| ತಂದೆಯ ಹೆಸರು | **ನಾರಾಯಣಸ್ವಾಮಿ** |
| ವಯಸ್ಸು | **52 ವರ್ಷ** |
| ವೃತ್ತಿ | **ಶಿಕ್ಷಕರು** |
| ವಾಸಸ್ಥಳ | **ಹಿರಿಸಾವೆ** |
| ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ | **26.02.2026** |

**ಮುಖ್ಯವಿಚಾರಣೆಃ ಆರೋಪಿ ಪರ ಶ್ರೀ ಡಿ.ಕೆ.ಎಂ ವಕೀಲರಿಂದಃ**

ನಾನು 27 ವರ್ಷಗಳಿಂದ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಮಾಸಿಂ 135000 ರೂ ಸಂಬಳ ಪಡೆಯುತ್ತಿದ್ದೇನೆ. ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ 7 ಎಕರೆ ಪಿತ್ರಾರ್ಜಿತ ಆಸ್ತಿ ಇದೆ. ಅದರ ಮಂಜೂರಾತಿಗೆಂದು ನನ್ನ ಮಗನ ಹೆಸರಿನಲ್ಲಿ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಜಮೀನಿನಲ್ಲಿ ನಾನು 10 ವರ್ಷಗಳಿಂದ ಅನುಭವದಲ್ಲಿದ್ದು, ರಾಗಿ, ಹುರುಳಿ, ಹೆಸರುಕಾಳು, ಎಳ್ಳು ಮತ್ತು ತೆಂಗು ಬೆಳೆ ಬೆಳೆಯುತ್ತೇವೆ.

ನನಗೆ ಪಿರ್ಯಾದಿಯ ಪರಿಚಯವಿಲ್ಲ, ಅವರನ್ನು ನ್ಯಾಯಾಲಯದಲ್ಲಿ ಮೊದಲ ಬಾರಿ ನೋಡಿರುತ್ತೇನೆ. ನಾನು ನನ್ನ ಚೆಕ್ ಪುಸ್ತಕ ಕಳೆದುಹೋಗಿರುವ ಬಗ್ಗೆ ಬ್ಯಾಂಕಿಗೆ ತಿಳಿಸಿದ್ದು ಬಿಂಡಿಗ ನವಿಲೆ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತೇನೆ. ನಾನು ಆರ್ಥಿಕವಾಗಿ ಚೆನ್ನಾಗಿರುವುದರಿಂದ ನನಗೆ ಸಾಲ ಪಡೆಯುವ ಅವಶ್ಯಕತೆ ಇರುವುದಿಲ್ಲ. ನಿ.ಪಿ.1 ರಲ್ಲಿರುವ ಸಹಿ ಮತ್ತು ಬರವಣಿಗೆ ನನ್ನದಲ್ಲ. ನನಗೆ ಈ ಪ್ರಕರಣದ ತಿಳುವಳಿಕೆ ನೋಟೀಸ್ ತಲುಪಿರುವುದಿಲ್ಲ.

1. ಸಿಸಿ ನಂ. 193/20ರ ಪ್ರಕರಣದ ಪಿರ್ಯಾದು, ನಿಶಾನೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-1 ಎಂದು,
2. ಸಿಸಿ ನಂ. 1326/22ರ ಪ್ರಕರಣದ ಪಿರ್ಯಾದು, ನಿಶಾನೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-2 ಎಂದು,
3. ಪಿ ಸಿ ಆರ್ ನಂ. 613/22ರ ಪ್ರಕರಣದ ಪಿರ್ಯಾದು, ನಿಶಾನೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-3 ಗುರುತಿಸಲಾಯಿತು.

**ಆದುದರಿಂದ ಪ್ರಕರಣವನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.**

**ಪಾಟಿಸವಾಲುಃ ಪಿರ್ಯಾದುದಾರರ ಪರ ವಕೀಲರು ಗೈರುಹಾಜರಿದ್ದು ನ್ಯಾಯಾಭಿವೃದ್ಧಿ ದೃಷ್ಟಿಯಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ ಹೇ ಕೇ ಸರಿ ಇದೆ.

3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.